ಎಂಜಿನ್ನಿಗೆ ಸೇಂಗಾ ಎಣ್ಣೆಯನ್ನೇ ಹಾಕಿ ಓಡಿಸಿದ್ದ. ಅಂದರೆ, ಬೆಂಗಳೂರಿನ ಭಾಷೆಯಲ್ಲಿ ಕಡಲೆಕಾಯಿ ಎಣ್ಣೆಯನ್ನೇ ಹಾಕಿದ್ದ. ಅದಕ್ಕೆ 'ಡೀಸೆಲ್ ಎಂಜಿನ್' ಎಂತ ಹೆಸರು ಬಂತು. ಅದನ್ನು ತಯಾರು ಮಾಡಿದವನ ಹೆಸರು ರಡಾಲ್ಫ್ ಡೀಸೆಲ್ ಬದಲು ರಡಾಲ್ಫ್ ಮೈಕೆಲ್ ಆಗಿದ್ದಿದ್ದರೆ ಇವೊತ್ತು ರಸ್ತೇಲೆಲ್ಲ ಮೈಕೆಲ್ ಗಾಡಿಗಳು, ನೀರೆತ್ತಲು ಮೈಕೆಲ್ ಪಂಪ್‌ಸೆಟ್‌ಗಳು ಓಡ್ತಿದ್ದವು' ಎಂದು ಹೇಳುತ್ತ ನಾನು ಸೈಂಟಿಫಿಕ್ ಚರಿತ್ರೆಯನ್ನು ಬಿಚ್ಚಿದೆ.

'ಹೌದಾ? ಹಳ್ಳಿಯ ಪಂಪ್‌ಸೆಟ್‌ಗೆ ಅಂತ ಆಗ ರೈತರು ಸೈಕಲ್ ಮೇಲೆ ಮೈಕೆಲ್ ತರಬೇಕಾಗ್ತಿತ್ತು' ಎಂದಳು ರೇಣುಕಾ.

'ಪೆಟ್ರೋಲ್ ಟ್ಯಾಂಕಿಗೆ ಕೊಬ್ರಿ ಎಣ್ಣೆ ಹಾಕಿ ಗಾಡಿ ಓಡಿಸಿದರೆ ರಸ್ತೇಲಿ ಎಂಥ ವಾಸ್ನೆ ಬರ್ತದೆ ಯಾರಾದರೂ ಹೇಳ್ತೀರಾ?' ಎಂದು ಪಡ್ರೆ ಕೇಳಿದರು.

ರಸ್ತೆಯಲ್ಲಿ ಬೈಕ್ ಹಠಾತ್ತಾಗಿ ಸೀಝ್ ಆಗಿ ನಿಂತ ಹಾಗೆ ಕ್ಲಾಸೆಲ್ಲ ಮೌನವಾಯಿತು. ಯಾರೂ ಉತ್ತರಿಸಲಿಲ್ಲ. ಎಲ್ಲರೂ ನಾನಾ ವಾಸನೆಗಳ ನೆನಪನ್ನು ಕೆದಕುತ್ತಿದ್ದರೇನೊ.

'ದೋಸೆಯ ವಾಸನೆ ಬರ್ತದೆ' ಎಂದು ಪಡ್ರೆಯವರೇ ಘೋಷಿಸಿದರು. ಬೈಕಿನ ಟ್ಯಾಂಕಿಗೆ ಕೊಬ್ರಿ ಎಣ್ಣೆ ತುಂಬಿಸಿಕೊಂಡು ಪುತ್ತೂರಿನ ರಸ್ತೆಯಲ್ಲಿ ಓಡಾಡುವ ಯುವಕನ ಹೆಸರನ್ನೂ ಹೇಳಿದರು.

ಚರ್ಚೆಯ ದಿಕ್ಕು ಬದಲಾಯಿತು. ತೆಂಗಿನ ಎಣ್ಣೆಯ ಹಾಗೆ ಸೇಂಗಾ ಎಣ್ಣೆಯನ್ನೂ ತಾಳೆ ಎಣ್ಣೆಯನ್ನೂ (ಪಾಮ್ ಆಯಿಲ್) ಗಾಡಿ ಓಡಿಸಲು ಬಳಸಬಹುದು; ಬಾಳೆ ದಿಂಡುಗಳನ್ನು ಕೊಳೆಸಿ ಮಿಥೇನ್ ಗ್ಯಾಸನ್ನೂ ಗಾಡಿಗೆ ತುಂಬಿಸಿ ಓಡಿಸಬಹುದು ಎಂದಿದ್ದೇ ತಡ, ಎಲ್ಲರೂ ತಲೆ ಓಡಿಸತೊಡಗಿದರು.

★★★

ಇದೆಲ್ಲ ಈಗ ನೆನಪಾಗಲು ಕಾರಣ ಏನೆಂದರೆ, ನಾವು ಗಂಡಹೆಂಡತಿ ಈಚೆಗೆ ಪಾಂಡಿಚೇರಿಯ ಮಾರ್ಕೆಟ್ ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿದ್ದೆವು. ಇಳಿಸಂಜೆಯ ಹೊತ್ತು. ಪೇಟೆಯಲ್ಲಿ ರಷ್ ತುಸು ಜಾಸ್ತಿ ಇತ್ತು. ನಮಗೆ ಏನನ್ನೂ ಖರೀದಿ ಮಾಡುವ ವಿಚಾರ ಇರಲಿಲ್ಲ ಅನ್ನಿ. ಶಾಪಿಂಗ್ ವಿಚಾರದ ಮಟ್ಟಿಗೆ ನನ್ನ ಪತ್ನೀ ಥೇಟ್ ಸಾಕ್ರೆಟೀಸನ ಹಾಗೇ! ಆ ಸಂತನ ಬಗ್ಗೆ ಗೊತ್ತಲ್ಲ? ಅವನೂ ಆಗಾಗ ಸಂತೆಗೆ ಹೋಗುತ್ತಿದ್ದನಂತೆ. ಎಲ್ಲ ಅಂಗಡಿಗಳಿಗೂ ತಲೆ ಹಾಕಿ, ಕೂಲಂಕಷ ನೋಡುತ್ತಿದ್ದನಂತೆ. ಖರೀದಿಗಲ್ಲ. ಅಂದಿನ ಬದುಕಿಗೆ ಅಗತ್ಯವಿಲ್ಲದ ಏನೇನು ಸಾಮಾನುಗಳು ಪೇಟೆಗೆ ಬಂದಿವೆ ಅನ್ನೋದನ್ನ ನೋಡಲಿಕ್ಕೆ ಅಷ್ಟೆ. ಅವನ ಹಾಗೇ ತನಗೆ ಬೇಡವಾದದ್ದು ಏನೇನಿವೆ ಅಂತ ನೋಡಲಿಕ್ಕಷ್ಟೇ ನನ್ನ ಪತ್ನಿ ಪೇಟೆಗೆ ಹೋಗುತ್ತಾಳೆ. ಆಗೊಮ್ಮೆ ಈಗೊಮ್ಮೆ ನನ್ನನ್ನೂ ಬಾಲಂಗೋಚಿ ಮಾಡಿಕೊಂಡು.

ಪಾಂಡಿಚೇರಿಯ ರಸ್ತೆಯಲ್ಲಿ ವ್ಯಾಪಾರ ಜೋರಾಗಿತ್ತು. ಕೊರೊನಾ ಮಾರಿಯ ಎರಡನೇ ಅಲೆಯೂ ಮುಗಿದು ಮೂರನೇ ಡೆಲ್ಟಾ ಅಲೆ ಬರಲಿಕ್ಕಿದೆ ಅಂತ ಚಾನೆಲ್ಲುಗಳಲ್ಲಿ ಗದ್ದಲ ಜೋರಾಗಿತ್ತಲ್ಲ? ಅದಕ್ಕೇ ಆ ಅಲೆ ಬರುವ ಮುನ್ನ ಏನೇನನ್ನೆಲ್ಲ ಮನೆತುಂಬಿಸಿಕೊಳ್ಳಬೇಕು ಅಂತ ತಲೆತುಂಬ ಲಿಸ್ಟ್ ಇಟ್ಟುಕೊಂಡು ಜನರು ಸಂತೆಗೆ ನುಗ್ಗಿದ್ದರು. ಯಾವ ಮಾರಿಯೊ, ಯಾವ ಅಲೆಯೊ ನಾವಂತೂ ಅಲೆ ಮಾರಿಯಾಗಿದ್ದೆವು.

ನಮ್ಮ ಬದುಕಿಗೆ 'ಇಹದ ವ್ಯಾಪಾರ' ಎಂದು ಯಾಕೆ ಹೇಳುತ್ತಾರೊ? ಅಂಗಡಿಗಳಲ್ಲಿ ನಡೆಯುವ ವ್ಯಾಪಾರಕ್ಕೂ ಇಹದ ವ್ಯಾಪಾರಕ್ಕೂ ಏನಾದರೂ ಸಂಬಂಧ ಇದೆಯೊ ಏನೊ. ಯಾಕಂದ್ರೆ, ಕೊರೊನಾದಿಂದಾಗಿ ಎಲ್ಲ ಕಡೆ ವ್ಯಾಪಾರ, ವ್ಯವಹಾರಗಳೆಲ್ಲ ಬಂದ್ ಆಗಿದ್ದಾಗಲೇ ಎಷ್ಟೊಂದು ಲಕ್ಷ ಜನರು ಇಹದ ವ್ಯಾಪಾರ ಮುಗಿಸಿ ಹೊರಟುಹೋದರು. ಈ ಪರಿಯ ಸಾವಿಗೆ ಕೊರೊನಾ